ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2052

2 ಸದಸ್ಯರ ಹೆಸರು : ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3 ಉತ್ತರಿಸುವ ದಿನಾಂಕ : 17-03-2022

4 ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರಮ ಸಂಖ್ಯೆ	ಚುಕ್ಕೆ ಗುರುತಿಲ್ಲದ ಪ್ರಶ್ನೆ	ಉತ್ತರ
1	ರಾಜ್ಯದಲ್ಲಿ ಕಾನೂನು ಬಲವರ್ಧನೆಗೆ ಪಿ.ಇ.ಬಿ (ಪೊಲೀಸ್ ಎಷ್ಟಾಬ್ಲಿಷ್ಮೆಂಟ್ ಬೋರ್ಡ್) ಮೂಲಕ ಪೊಲೀಸ್ ನಿರೀಕ್ಷಕರುಗಳ ಹಾಗೂ ಅಧಿಕಾರಿಗಳ ವರ್ಗಾವಣೆಗಳನ್ನು 2 ವರ್ಷಕ್ಕೆ ನಿಗದಿಪಡಿಸಿದ್ದು, ಒಂದು ವರ್ಷ ಪೂರೈಸಿದ ಅಧಿಕಾರಿಗಳನ್ನು ಕೂಡಲೇ ವರ್ಗಾವಣೆ ಮಾಡಲಾಗುತ್ತಿದ್ದು, ಇದರಿಂದ ಕಾನೂನು ಸುವ್ಯವಸ್ಥೆಯ ಮೇಲೆ ಪರಿಣಾಮ ಉಂಟಾಗುವುದಿಲ್ಲವೇ:	ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 60 ಪೊಸಇ 2009, ದಿನಾಂಕ:24/08/2009 ರಂತೆ ಪೊಲೀಸ್ ಠಾಣೆಯ ಪ್ರಭಾರ ಹೊಂದಿರುವ ಠಾಣಾಧಿಕಾರಿ, ಪೊಲೀಸ್ ವೃತ್ತದ ಪ್ರಭಾರ ಹೊಂದಿರುವ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಉಪ ವಿಭಾಗದ ಪ್ರಭಾರವನ್ನು ಹೊಂದಿರುವ ಪೊಲೀಸ್ ಉಪ ವಿಭಾಗಾಧಿಕಾರಿಗಳು ಕನಿಷ್ಠ 02 ವರ್ಷಗಳ ಪದಾವಧಿ ಹೊಂದಿರತಕ್ಕದ್ದು. ತದನಂತರ ಕರ್ನಾಟಕ ಪೊಲೀಸ್ (ತಿದ್ದಪಡಿ) ಕಾಯ್ದೆ 2013, ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 74 ಸಸನ 2012, ದಿನಾಂಕ:18.06.2013ರಲ್ಲಿ ಕನಿಷ್ಠ ಪದಾವಧಿಯನ್ನು ಒಂದು ವರ್ಷದ ಅವಧಿ ಎಂದು ತಿದ್ದುಪಡಿಯನ್ನು ತರಲಾಗಿರುತ್ತದೆ. ಇದರಿಂದಾಗಿ ಕಾನೂನು ಸುವ್ಯವಸ್ಥೆಗೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ.
2	ಪೊಲೀಸ್ ಅಧಿಕಾರಿಗಳ ವರ್ಗಾವಣೆಯನ್ನು ಕನಿಷ್ಠ 2 ವರ್ಷಕ್ಕೆ ನಿಗಧಿಪಡಿಸಲು ಸರ್ಕಾರ ಚಿಂತಿಸಿದೆಯೇ?	ಇಲ್ಲ.

ಸಂಖ್ಯೆ: ಒಇ 47 ಪಿಇಎಂ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು